DECCAN HERALD
Online Newspaper Clipping Service
Dated, Sunday, 27th , August– 2017
Pg.No.04

# DD clause creates chaos during MBBS, BDS mop-up round

**BENGALURU: Chaos prevailed on the premises of the Karnataka Examinations Authority (KEA) here on Saturday as parents and students demanded the postponement of the mop-up round for unfilled MBBS and BDS seats.**

The KEA is conducting a mop-up round for allotment of unfilled seats. On Saturday morning, the allotment was done for Non-Resident Indian (NRI) and minority category seats. In the afternoon, the allotment was done for students of all categories on the basis of NEET ranks.

To participate in the counselling, students were required to have demand drafts of the prescribed fee. Many students and parents had not checked the KEA website for the update about the round. As they found out late, they were not able to get a demand draft from banks which were closed for the festival weekend.



Students wait for their turn to attend the mop-up round of counselling for MBBS and BDS seats at KEA office in Bengaluru on Saturday. DH PHOTO

"We have been told that we cannot take part without a demand draft. But all banks have been closed since Friday. They should postpone the round so that we do not miss out on this opportunity," a parent said.

KEA officials, however, pointed out that they were not in a position to change the schedule for the mop-up round as it was prescribed by the central authority. "We uploaded the information about the mop-up round on the night of August 22 on the website. Students had ample opportunity on August 23 and 24 to get demand drafts from banks," a KEA official said.

By afternoon, to facilitate those who were not able to produce demand drafts, the KEA set up facility to accept credit card and debit card payments.

**DH News Service**

# ಕೊನೆ ಗಳಿಗೆಯಲ್ಲಿ ವೈದ್ಯ, ದಂತ ವೈದ್ಯ ಸೀಟು ಪ್ರಕಟ: ಡಿಡಿ ತರಲಾಗದೆ ಪರದಾಟ

**ವಿಕ ಸುದ್ದಿಲೋಕ** ಬೆಂಗಳೂರು

ಕೊನೆ ಕ್ಷಣದಲ್ಲಿ ವೈದ್ಯ ಮತ್ತು ದಂತ ವೈದ್ಯ ಕೋರ್ಸ್‌ನ ಸೀಟುಗಳನ್ನು ಪ್ರಕಟಿಸುವ ಸಂಪ್ರದಾಯವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈ ವರ್ಷವೂ ಮುಂದುವರಿಸಿದೆ. ಸಾಲು ಸಾಲು ರಜೆಗಳೂ ಆಗಮಿಸಿದ್ದರಿಂದ ಸಹಸ್ರಾರು ವಿದ್ಯಾರ್ಥಿಗಳು ಸಕಾಲದಲ್ಲಿ ಶುಲ್ಕ ಪಾವತಿಸಿ, ಡಿಡಿ ಪಡೆಯಲಾಗದೆ ಶನಿವಾರ ತೀವ್ರತೊಂದರೆ ಅನುಭವಿಸುವಂತಾಯಿತು.

ಆ.22ರಂದು ತಡರಾತ್ರಿ ಉಳಿಕೆ ಸೀಟುಗಳ ಸಂಖ್ಯೆಯನ್ನು ಪ್ರಕಟಿಸಿದ ಕೆಇಎ, ಆ.26 ರಿಂದ 28ರವರೆಗೆ ಈ ಸೀಟುಗಳಿಗೆ ಆಫ್‌ಲೈನ್ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗುವುದು ಎಂದು ಪ್ರಕಟಣೆ ನೀಡಿತ್ತು. ಶುಕ್ರವಾರದಿಂದ ಭಾನುವಾರದವರೆಗೆ ರಜೆ ಇದ್ದಿದ್ದರಿಂದ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಡಿಡಿ ತರಲು ಸಮಯಾವಕಾಶ ಇರಲಿಲ್ಲ. ಹೀಗಾಗಿ ವಿದ್ಯಾರ್ಥಿ ಮತ್ತು ಪೋಷಕರು ಪರದಾಡಿದರು. ಅದರಲ್ಲೂ ಕೆಇಎ ವೆಬ್‌ಸೈಟ್ ನೋಡಲು ಅವಕಾಶವಾಗದ ಗ್ರಾಮೀಣ ಭಾಗದ ವಿದ್ಯಾರ್ಥಿಗಳೂ ಪರದಾಡುವಂತಾಯಿತು.

ಮತ್ತೊಂದೆಡೆ ಆ.26ರಂದು ಎಂದಿನಂತೆ ಕೌನ್ಸೆಲಿಂಗ್‌ಗೆ ಬಂದ ವಿದ್ಯಾರ್ಥಿಗಳಿಗೆ 'ಡಿಡಿ ಇದ್ದರೆ ಮಾತ್ರ ಕೌನ್ಸೆಲಿಂಗ್‌ಗೆ ಪ್ರವೇಶ' ಎಂದ ಕೂಡಲೇ ಆತಂಕಕ್ಕೆ ಒಳಗಾದರು. ಹಲವರು ಕೆಇಎ ಎದುರು ಜಮಾಯಿಸಿ, ಕಾಲಾವಕಾಶ ಕೊಡುವಂತೆ ಕೋರಿದರು. ಪ್ರತಿ ವರ್ಷವೂ ಕೊನೇ ಗಳಿಗೆಯಲ್ಲಿ ಉಳಿಕೆ ಸೀಟುಗಳನ್ನು ಪ್ರಕಟಿಸಿ ಅವಾಂತರ ಸೃಷ್ಟಿಸುವುದೇ ರಾಜ್ಯ ಸರಕಾರದ ಜಾಯಮಾನವಾಗಿದೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು.

ಪ್ರವೇಶಕ್ಕೆ ಇನ್ನೂ ಕಾಲಾವಕಾಶವಿದ್ದರೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ರಜಾ ದಿನಗಳಲ್ಲೇ ಯಾಕೆ ಪ್ರಕಟಣೆ ಹೊರಡಿಸಬೇಕು? ಇದರ ಹಿಂದಿರುವ ಉದ್ದೇಶವೇನು ಎಂಬ ಪ್ರಶ್ನೆಯೂ ಉದ್ಭವಿಸಿದೆ.

ಡಿಡಿಯಿಲ್ಲದೆ ಸಾವಿರಾರು ಸೀಟುಗಳು ಖಾಲಿ ಉಳಿಯುತ್ತವೆ. ಖಾಲಿ ಸೀಟುಗಳಿಗೆ ವಿದ್ಯಾರ್ಥಿಗಳು ಆಗಮಿಸಿಲ್ಲ ಎಂದು ಕೆಇಎ ನಮೂದಿಸಿ, ಖಾಲಿ ಸೀಟುಗಳನ್ನು ಖಾಸಗಿ ಖಾಸಗಿ ಸೀಟುಗಳಾಗಿ ಪರಿವರ್ತಿಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂತು. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗಿದೆ ಎಂದು ಆರೋಪಿಸಿದರು.

ಪೋಷಕರು ಮತ್ತು ವಿದ್ಯಾರ್ಥಿಗಳ ಒತ್ತಾಯಕ್ಕೆ ಮಣಿದ ಪ್ರಾಧಿಕಾರವು ಕೊನೆಗೆ ಸರಕಾರದ ಸೂಚನೆ ಮೇಗೆ ಆನ್‌ಲೈನ್ ಶುಲ್ಕ ಪಾವತಿಗೆ ವಿಶೇಷ ಕೌಂಟರ್‌ಗಳ ವ್ಯವಸ್ಥೆ ಮಾಡಿತ್ತು. ಜತೆಗೆ ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್ ಸ್ವೀಕರಿಸಲೂ ನಿರ್ಧರಿಸಿತು.

**ಸೀಟುಗಳ ವಿವರ:** ವೈದ್ಯ ಸೀಟುಗಳು ನಾನಾ ಕೆಟಗರಿಯಲ್ಲಿ 243 ಹಾಗೂ ಎನ್‌ಆರ್‌ಐ ಕೋಟಾದಡಿ 514 ಸೇರಿ ಸುಮಾರು 757 ಸೀಟುಗಳು ಹಾಗೂ ದಂತ ವೈದ್ಯ ವಿಭಾಗದಲ್ಲಿ ನಾನಾ ಕೆಟಗರಿಯಲ್ಲಿ 344 ಹಾಗೂ ಎನ್‌ಆರ್‌ಐ ಕೋಟಾದಡಿ 339 ಸೀಟುಗಳು ಉಳಿಕೆಯಾಗಿದ್ದವು. ಇದಲ್ಲದೆ ಹಂಚಿಕೆಯಾದ ನಂತರ ನಾನಾ ಕಾರಣಗಳಿಂದ ಅವುಗಳನ್ನು ರದ್ದುಗೊಳಿಸಿರುವ ವೈದ್ಯ ಮತ್ತು ದಂತವೈದ್ಯ ಸೀಟುಗಳೂ ಇವೆ.

## ಆನ್‌ಲೈನ್ ಪಾವತಿಗೆ ಅವಕಾಶ: ಶರಣ ಪ್ರಕಾಶ್ ಪಾಟೀಲ್



**ಕಲಬುರಗಿ:** ರಾಜ್ಯದಲ್ಲಿ ನಿಗದಿಯಂತೆ ವೈದ್ಯಕೀಯ ಸೀಟುಗಳಿಗೆ ಪ್ರವೇಶ ನಡೆಯುತ್ತಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರು ಅನಗತ್ಯವಾಗಿ ಗೊಂದಲಕ್ಕೊಳಗಾಗುವುದು ಬೇಡ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಹೇಳಿದ್ದಾರೆ.

"ಮೆಡಿಕಲ್ ಕೌನ್ಸಿಲ್ ನಿಯಮಾವಳಿ ಪ್ರಕಾರ ಎಲ್ಲವೂ ನಿಗದಿತವಾಗಿ ನಡೆಯುತ್ತಿದೆ. ಎರಡು -ಮೂರು ದಿನ ಬ್ಯಾಂಕ್ ರಜೆ ಬಂದ ಕಾರಣ ಕೆಲವು ವಿದ್ಯಾರ್ಥಿಗಳಿಗೆ ಡಿಡಿ ಕಟ್ಟಲು ತೊಂದರೆಯಾಗಿದೆ. ಹೀಗಾಗಿ, ಡಿಡಿ ತೆಗೆಸಲು ಸಾಧ್ಯವಾಗದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಶುಲ್ಕ ಪಾವತಿ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಅಪರ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನವೂ ನೀಡಲಾಗಿದೆ," ಎಂದು ಪತ್ರಿಕೆಗೆ ತಿಳಿಸಿದರು.

"ಬ್ಯಾಂಕ್ ಅಕೌಂಟ್ ಇಲ್ಲದ ವಿದ್ಯಾರ್ಥಿಗಳು ಸ್ಥಳದಲ್ಲಿಯೇ ನಗದು ಶುಲ್ಕ ಪಾವತಿಸಲು ಕ್ಯಾಶ್ ಕೌಂಟರ್ ವ್ಯವಸ್ಥೆ ಮಾಡಲಾಗಿದೆ. ಭಾನುವಾರವೂ ಈ ಕೌಂಟರ್‌ನಲ್ಲಿ ಹಣ ಸಂದಾಯ ಮಾಡಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ಕಾರಣಕ್ಕೂ ದಿನಾಂಕ ಮುಂದೂಡುವ ಪ್ರಶ್ನೆಯೇ ಇಲ್ಲ. ಹೀಗಾಗಿ, ವಿದ್ಯಾರ್ಥಿಗಳು ಮತ್ತು ಪೋಷಕರು ಈಗ ನೀಡಿರುವ ಅವಕಾಶವನ್ನು ಬಳಸಿಕೊಳ್ಳಬೇಕು," ಎಂದು ಸಚಿವರು ಹೇಳಿದರು.

ಎರಡು ಸುತ್ತುಗಳಲ್ಲಿ ಹಂಚಿಕೆಯಾದ ನಂತರ ಉಳಿಕೆ ಸೀಟುಗಳ ಭರ್ತಿಗೆ ಕ್ರಮಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಶನಿವಾರ ಆನ್‌ಲೈನ್ ಪೇಮೆಂಟ್‌ಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಭಾನುವಾರವೂ ಮುಂದುವರಿಸುತ್ತೇವೆ. ನಾಳೆಯೊಳಗೆ ವೈದ್ಯ ಕೋರ್ಸ್ ಗಳಿಗೆ ಕೌನ್ಸೆಲಿಂಗ್ ಪೂರ್ಣಗೊಳಿಸುತ್ತೇವೆ.

**- ಗಂಗಾಧರಯ್ಯ**
ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ